ವಿಜಯವಾಣಿ
ಕನ್ನಡಿಗರ ಧ್ವನಿ

**Monday 22nd July 2024, Page No. 6**

# Governor's Appreciation for RVCE NCC Cadets

# ಎನ್‌ಸಿಸಿ ಕೆಡೆಟ್‌ಗಳಿಗೆ ಗೌರ್ನರ್ ಪ್ರಶಂಸೆ


ವಿಜಯವಾಣಿ

ಆರ್.ವಿ. ಶಿಕ್ಷಣ ಸಂಸ್ಥೆಯ ಎನ್‌ಸಿಸಿ ತಂಡಕ್ಕೆ ಪ್ರಶಂಸಾ ಪತ್ರವನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಆರ್‌ವಿ ವಿವಿ ಕುಲಾಧಿಪತಿ ಡಾ.ಎ.ವಿ.ಎಸ್.ಮೂರ್ತಿ ಅವರಿಗೆ ವಿತರಿಸಿದರು. ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ಹಾಜರಿದ್ದರು.

**ಬೆಂಗಳೂರು:** ಆರ್.ವಿ. ಶಿಕ್ಷಣ ಸಂಸ್ಥೆಯು ಎನ್‌ಸಿಸಿಗೆ ಅನುಕರಣೀಯ ಕೊಡುಗೆಯನ್ನು ಪರಿಗಣಿಸಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಆರ್.ವಿ. ಶಿಕ್ಷಣ ಸಂಸ್ಥೆಯ ವಿವಿಧ 9 ಕಾಲೇಜುಗಳು ಗಣರಾಜ್ಯೋತ್ಸವ ಶಿಬಿರ, ಅಖಿಲ ಭಾರತ ಥಾಲ್ ಸೈನಿಕ ಶಿಬಿರ, ಇಂಟರ್ ಡೈರೆಕ್ಟೋರೇಟ್ ಸ್ಪೋರ್ಟ್ಸ್ ಶೂಟಿಂಗ್ ಚಾಂಪಿಯನ್‌ಶಿಪ್- 2024 ಮತ್ತು ಯೂತ್ ಎಕ್ಸ್‌ಚೇಂಜ್ ಕಾರ್ಯಕ್ರಮಗಳಂತಹ ಎಲ್ಲ ರಾಷ್ಟ್ರೀಯ ಶಿಬಿರಗಳಲ್ಲಿ ಉತ್ತಮ ಪ್ರದರ್ಶನ ನೀಡಿದೆ. 500 ಕೆಡೆಟ್‌ಗಳೊಂದಿಗೆ ಎನ್‌ಸಿಸಿಯನ್ನು ಹೊಂದಿದೆ.

ಹತ್ತು ಕೆಡೆಟ್‌ಗಳು ಸಶಸ್ತ್ರ ಪಡೆಗಳಿಗೆ ಸೇರಿದ್ದಾರೆ, ಒಂಬತ್ತು ಕೆಡೆಟ್‌ಗಳು ವಿವಿಧ ದೇಶಗಳಲ್ಲಿ ವಿದ್ಯಾರ್ಥಿ ರಾಯಭಾರಿಗಳಾಗಿ ಭಾರತವನ್ನು ಪ್ರತಿನಿಧಿಸುವ ಯುವ ವಿನಿಮಯ ಕಾರ್ಯಕ್ರಮಗಳನ್ನು ಪೂರ್ಣಗೊಳಿಸಿದ್ದಾರೆ. ಆರು ಕೆಡೆಟ್‌ಗಳು ಇಂಟರ್ ಡೈರೆಕ್ಟರೇಟ್ ಸ್ಪೋರ್ಟ್ಸ್ ಶೂಟಿಂಗ್ ಚಾಂಪಿಯನ್‌ಶಿಪ್- 2024ರಲ್ಲಿ ಭಾಗವಹಿಸಿದ್ದಾರೆ.

ಆರ್.ವಿ. ವಿಶ್ವವಿದ್ಯಾಲಯದ ಕುಲಾಧಿಪತಿಗಳೂ ಆಗಿರುವ ಆರ್‌ವಿ ಶಿಕ್ಷಣ ಸಂಸ್ಥೆಗಳ ಗೌರವ ಕಾರ್ಯದರ್ಶಿ ಡಾ.ಎ.ವಿ.ಎಸ್. ಮೂರ್ತಿ ನೇತೃತ್ವದಲ್ಲಿ ಸಂಸ್ಥೆಯು ನಡೆಯುತ್ತಿದೆ. ಸಮರ್ಥ ನಾಯಕತ್ವವನ್ನು ಹೊಂದಿರುವ ಸಂಸ್ಥೆಯು ಯುವಜನರಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸುವ ಮೂಲಕ ಮತ್ತು ಎನ್‌ಸಿಸಿ ಕೆಡೆಟ್‌ಗಳನ್ನು ರಾಷ್ಟ್ರ ನಿರ್ಮಾಣದ ಜವಾಬ್ದಾರಿಯುತ ನಾಗರಿಕರನ್ನಾಗಿ ಪರಿವರ್ತಿಸುವ ಮೂಲಕ ಐತಿಹಾಸಿಕ ಮೈಲಿಗಲ್ಲನ್ನು ಸಾಧಿಸಿದೆ. ಈ ಕಾರಣಕ್ಕಾಗಿ ಡಾ. ಎವಿಎಸ್ ಮೂರ್ತಿ ಹಾಗೂ ಶಿಕ್ಷಣ ಸಂಸ್ಥೆಯನ್ನು ರಾಜ್ಯಪಾಲರು ಗೌರವಿಸಿದ್ದಾರೆ.